ಉ) ಹೀಗೆ ಶುಲ್ಕ ಪಾವತಿಸಿದರೂ ಕೂಡ ಪರವಾನಗಿ ನೀಡದೇ ಇರುವುದು ಕಾನೂನು ಬದ್ಧವೆಂದು ಸರ್ಕಾರವು ತಿಳಿದಿದೆಯೇ: ಇಲ್ಲವೆಂದಾದಲ್ಲಿ, ಇದುವರೆಗೆ ನೀಡದೇ ಇರಲು ಕಾರಣವೇನು; ವಿವರ ಒದಗಿಸುವುದು?

ಶ್ರೀ ಬಿ.ಎಸ್.ಪಾಟೀಲ್ ಸಾಸನೂರು (ಕೃಷಿ ಮಾರುಕಟ್ಟೆ ಸಚಿವರು)

ಅ) 2003–04ನೇ ಸಾಲಿಗೆ ಲೈಸನ್ಸ್ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದ 201 ಪೇಟೆ ಕಾರ್ಯಕರ್ತರ ಲೈಸನ್ಸ್ ನವೀಕರಣ ಮಾಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) 2003–04ನೇ ಸಾಲಿಗೆ ಲೈಸನ್ಸ್ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದ 201 ಪೇಟೆ ಕಾರ್ಯಕರ್ತರ ಲೈಸನ್ಸ್ ನವೀಕರಣ ಮಾಡಲಾಗಿದೆ.

ಪ್ರಾಂಗಣದಲ್ಲಿ ವ್ಯವಹರಿಸಲು ಲೈಸನ್ಸ್‌ಗಾಗಿ ಬರುವ ಹೊಸ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದು.

ಈ) ಮೇಲಿನಂತೆ

ಉ) 2003–04ನೇ ಸಾಲಿಗೆ ಲೈಸನ್ಸ್ ನವೀಕರಣಕ್ಕಾಗಿ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಿದ 201 ಪೇಟೆ ಕಾರ್ಯಕರ್ತರ ಲೈಸನ್ಸ್ ನವೀಕರಿಸಲಾಗಿದೆ.

ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳ ರಫ್ತಿನ ಬಗ್ಗೆ

4329 (4865) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಸಹಕಾರ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಯನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತದೆ;

ಆ) ತೋಟಗಾರಿಕೆ ಬೆಳೆಗಳ ಪೈಕಿ ಯಾವ ಯಾವ ಬೆಳೆಗಳನ್ನು ಯಾವ ಯಾವ ದೇಶಕ್ಕೆ ರಫ್ತು ಮಾಡಲಾಗುತ್ತಿದೆ;

ಇ) ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ವರ್ಷಗಳಲ್ಲಿ ರಫ್ತಿನಿಂದ ಎಷ್ಟೆಷ್ಟು ಆದಾಯ ಬಂದಿದೆ;

ಈ) ಈ ಬೆಳೆಗಳ ರಫ್ತನ್ನು ಉತ್ತೇಜಿಸಲು ಕೈಗೊಂಡ/ಕೈಗೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು **15.30** ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಸಲಾಗುತ್ತಿದೆ. ವಿವರಗಳು ಕೆಳಕಂಡಂತಿದೆ.

ವಿವರಗಳು	ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ)	ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)
ಹಣ್ಣುಗಳು	2.60	41.64
ತರಕಾರಿಗಳು	3.78	66.54
ಸಾಂಬಾರು ಬೆಳೆಗಳು	2.45	4.96
ತೋಟದ ಬೆಳೆಗಳು	6.26	3.34

1	2	3
ವಾಣಿಜ್ಯ ಪುಷ್ಪಗಳು	0.20	1.56
ಔಷಧಿಯ ಗಿಡಗಳು	0.004	0.045
ಸುಗಂಧಿತ ಗಿಡಗಳು	0.006	0.091
ಒಟ್ಟು	15.30	118.17

ಆ) ರಾಜ್ಯದಿಂದ ತೋಟಗಾರಿಕೆ ಉತ್ಪನ್ನಗಳಾದ ಗುಲಾಬಿ ಈರುಳ್ಳಿ, ಆಲೂಗಡ್ಡೆ, ಮಿಡಿ ಸೌತೆಕಾಯಿ, ದ್ರಾಕ್ಷಿ, ಗೋಡಂಬಿ, ಮಾವು, ದಾಳಿಂಬೆ, ನಿಂಬೆ, ಕಲ್ಲಂಗಡಿ, ಆರಿಶಿನ, ಪುಷ್ಪಗಳು, ಸಂಸ್ಕರಿಸಿದ ಉತ್ಪನ್ನಗಳು ಮತ್ತು ಇತರೆ ಪದಾರ್ಥಗಳನ್ನು ಯೂರೋಪ್ ಅಮೆರಿಕ, ಮೆಕ್ಸಿಕೊ, ಇಂಡೋನೇಷಿಯ, ಶ್ರೀಲಂಕಾ, ಆಸ್ಟ್ರೇಲಿಯಾ ಸಿಂಗಾಪೂರ್, ಜಪಾನ್, ಮಧ್ಯಪ್ರಾಚ್ಯ ಮತ್ತು ಇತರೆ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ಇ) ಕಳೆದ 3 ವರ್ಷಗಳಲ್ಲಿ ರಫ್ತಾದ ಉತ್ಪನ್ನಗಳ ಮೌಲ್ಯವು ಕೆಳಕಂಡಂತಿರುತ್ತದೆ. (ಕೋಟಿ ರೂಗಳಲ್ಲಿ)

2000–01 – 1666

2001–02 – 1670

2002–03 – 1230 (ಏಪ್ರಿಲ್ 02ರಿಂದ ಡಿಸೆಂಬರ್ 02ರವರೆಗೆ)

ಈ) 1. ಗುಲಾಬಿ ಈರುಳ್ಳಿ, ಗರ್ಕಿನ್ಸ್ ಮತ್ತು ಪುಷ್ಪೋದ್ಯಮಗಳಿಗೆ ರಫ್ತುವಲಯಗಳನ್ನು ಭಾರತ ಸರ್ಕಾರದ ಸಹಯೋಗದೊಂದಿಗೆ ಸ್ಥಾಪಿಸಿದೆ. ಹಾಗೂ ಮಾವು, ದ್ರಾಕ್ಷಿ, ವೆನಿಲ್ಲಾ, ದಾಳಿಂಬೆ, ನಿಂಬೆ, ಔಷಧೀಯ ಹಾಗೂ ಸುಗಂಧದ್ರವ್ಯ ಬೆಳೆಗಳಿಗೆ ಕೃಷಿ ರಫ್ತು ವಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

2. ರಫ್ತು ಉತ್ತೇಜನ ನೀತಿ (2002–2007) ಯನ್ನು ಪ್ರಕಟಿಸಿದೆ.

3. ಕೇಂದ್ರ ಸರ್ಕಾರದ ಅಸೈಡ್ ಯೋಜನೆಯಡಿಯಲ್ಲಿ ಹಣ ಪಡೆದು ಮೂಲಭೂತ ಸೌಕರ್ಯಗಳಾದ ಸಂಗ್ರಹಣಾ ಕೇಂದ್ರಗಳು, ವಿಂಗಡಣೆ, ವಾಷಿಂಗ್, ಪ್ಯಾಕಿಂಗ್ ಸೌಲಭ್ಯ, ಹವಾನಿಯಂತ್ರಿತ ಸಾಗಾಣಿಕೆ, ಪ್ರೀಕೂಲಿಂಗ್, ಶೀತಲಗೃಹಗಳು, ಮಧ್ಯಂತರ ಶೀತಲಗೃಹಗಳು, ಸಂಸ್ಕರಣ ಘಟಕಗಳು ಮತ್ತು ರಫ್ತು ಸಂಕೀರ್ಣಗಳನ್ನು ಸೃಷ್ಟಿಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು.

4. ಪುಷ್ಪೋದ್ಯಮದ ಅಭಿವೃದ್ಧಿಗೆ ಅಂತರ ರಾಷ್ಟ್ರೀಯ ಮಟ್ಟದ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ.

5. ರಾಜ್ಯದಲ್ಲಿನ ರೈತ ಸಂಪರ್ಕ ಕೇಂದ್ರಗಳಿಂದ ಮಾರುಕಟ್ಟೆ ಬಗ್ಗೆ ಮಾಹಿತಿ ಒದಗಿಸಲಾಗುತ್ತಿದೆ.

6. ಕೃಷಿ/ತೋಟಗಾರಿಕೆ ಉತ್ಪನ್ನಗಳ ರಫ್ತಿನ ಅಭಿವೃದ್ಧಿಗಾಗಿ ಕೆಪೆಕ್ ಸಂಸ್ಥೆಯನ್ನು ಸ್ಥಾಪಿಸಿದೆ. ಹೂವುಗಳ ಮಾರಾಟಕ್ಕಾಗಿ ಕೆ.ಎ.ಐ.ಸಿ.ವತಿಯಿಂದ ಹೂವು ಹರಾಜು ಕೇಂದ್ರವನ್ನು ಸ್ಥಾಪಿಸಲಾಗಿದೆ.

7. ಕೊಯ್ಲಿನ ನಂತರದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶೀತಲ ಗೃಹಗಳು ಉಪಯೋಗಿಸುವ ವಿದ್ಯುಚ್ಛಕ್ತಿಯ ಪ್ರತಿ ಯೂನಿಟ್‌ಗೆ ರೂ. 1/–ರಂತೆ ಸಹಾಯಧನ ನೀಡಲಾಗುತ್ತಿದೆ.

8. ಕೇಂದ್ರ ಸರ್ಕಾರದ ಎನ್.ಹೆಚ್.ಬಿ., ಅಪೆಡಾ, ಸಿ.ಡಿ.ಬಿ., ಎನ್.ಸಿ.ಡಿ.ಸಿ., ಆಹಾರ ಸಂಸ್ಕರಣ ಮಂತ್ರಾಲಯ ಮತ್ತು ವಿವಿಧ ಮಂಡಳಿಗಳಿಂದ ಹಣ ಕಾಸಿನ ನೆರವನ್ನು ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆ, ಶೇಖರಣೆ-ಹಾಗೂ ಮಾರುಕಟ್ಟೆಗಾಗಿ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ.

9. ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳ ವೈಜ್ಞಾನಿಕ ಸಂಸ್ಕರಣೆ, ಮಾರುಕಟ್ಟೆ ಮತ್ತು ರಫ್ತನ್ನು ಉತ್ತೇಜಿಸಲು 6 ಆಹಾರ ಮತ್ತು ಕೃಷಿ ತಂತ್ರಜ್ಞಾನ ಪಾರ್ಕುಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಮೈಸೂರು ನಗರದಲ್ಲಿ ತೋಟಗಾರಿಕಾ ಇಲಾಖೆಯ ಉದ್ಯಾನವನಗಳ ಅಭಿವೃದ್ಧಿ ಕುರಿತು

4273 (4874) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ತೋಟಗಾರಿಕೆ ಇಲಾಖೆಯ ಉದ್ಯಾನವನಗಳು ಯಾವುವು?

ಆ) ಅವುಗಳ ಅಭಿವೃದ್ಧಿಗೆ ಸರ್ಕಾರ ಎಷ್ಟುವೆಚ್ಚದಲ್ಲಿ ಯಾವ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಮೈಸೂರು ನಗರದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 14 ಉದ್ಯಾನವನಗಳಿವೆ. ಅವು ಈ ಕೆಳಕಂಡಂತಿದೆ:

1) ಕರ್ಜನ್ ಪಾರ್ಕ್ ಬ್ಲಾಕ್–1
2) ಕರ್ಜನ್ ಪಾರ್ಕ್ ಬ್ಲಾಕ್–2
3) ಕರ್ಜನ್ ಪಾರ್ಕ್ ಬ್ಲಾಕ್–3
4) ಕುವೆಂಪು ಪಾರ್ಕ್, ನಿಶಾದ ಬಾಗ್.
5) ಕೇಂದ್ರ ಸಸ್ಯಗಾರ
6) ಜಲದರ್ಶಿನಿ ಅತಿಥಿಗೃಹ ಉದ್ಯಾನವನ
7) ಜಲಸನ್ನಿದಿ ಉದ್ಯಾನವನ (ಜಿಲ್ಲಾಧಿಕಾರಿಗಳ ನಿವಾಸ)
8) ವಿಭಾಗಧಿಕಾರಿ ಕಛೇರಿ ತೋಟ ಮತ್ತು ಉದ್ಯಾನವನ
9) ಗಾರ್ಡನ್ ಪಾರ್ಕ್ ಸಸ್ಯಗಾರ
10) ಜಿಲ್ಲಾಧಿಕಾರಿಗಳ ಕಛೇರಿ ಜಿಲ್ಲಾ ಉದ್ಯಾನವನ
11) ಕೃಷ್ಣ ರಾಜೇಂದ್ರ ಆಸ್ಪತ್ರೆ ಉದ್ಯಾನವನ
12) ಸರ್ಕಾರಿ ಭವನ ಅತಿಥಿ ಗೃಹ ಉದ್ಯಾನವನ ಮತ್ತು ಸಸ್ಯಗಾರ ಸುಬ್ಬರಾಯನ ಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ. ವಸ್ತು ಪ್ರದರ್ಶನ ಇಲಾಖೆ ಉದ್ಯಾನವನ.
13) ಸುಬ್ಬರಾಯನ ಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ.
14) ವಸ್ತು ಪ್ರದರ್ಶನ ಇಲಾಖೆ ಉದ್ಯಾನವನ.

ಆ) ಅವುಗಳ ಅಭಿವೃದ್ಧಿಗೆ ಅಲಂಕಾರಿಕ ಗಿಡಗಳನ್ನು ನೆಡುವುದು, ಹುಲ್ಲುಹಾಸು ನವೀಕರಣ, ನೀರಿನ ವ್ಯವಸ್ಥೆ, ಯಂತ್ರೋಪಕರಣಗಳ ವ್ಯವಸ್ಥೆ ಮತ್ತು ನಿರ್ವಹಣೆಗಾಗಿ ಅಗತ್ಯ ಸಾಮಗ್ರಿಗಳನ್ನು ಒದಗಿಸಲಾಗಿದೆ. ಇದಕ್ಕಾಗಿ 2002–03ನೇ ಸಾಲಿನಲ್ಲಿ ರೂ.6.72 ಲಕ್ಷಗಳನ್ನು ಮೀಜ್ಞ ಮಾಡಲಾಗಿದೆ.